**<u>ಹಿರಿಯ ದಿವಾಣಿ ನ್ಯಾಯಾಲಯ, ಕುಂದಗೋಳ</u>**

**<u>ಸಿ.ಸಿ. ನಂ. 05/2021 ಸಿ. ಡಬ್ಲ್ಯೂ: 5. ಪಿ ಡಬ್ಲ್ಯೂ : 4</u>**

ಹೆಸರು : ಬಸವರಾಜ

ತಂದೆಯ ಹೆಸರು : ಶಿವಪ್ಪ

ವಯಸ್ಸು : 43 ವರ್ಷ

ಉದ್ಯೋಗ : ಶೇತ್ಕಿ

ವಾಸಸ್ಥಳ : ಯರೇಬೂದಿಹಾಳ ತಾಃಕುಂದಗೋಳ.

ದಿನಾಂಕಃ 23/02/2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆಃ ಸಸಅ ರವರಿಂದ</u>**

1. ಚಾಸಾಃ1 ರಿಂದ 4 ರವರು ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿ ಗೊತ್ತು. ಯರೇಬೂದಿಹಾಳ ಶಾಖೆಯ ಕೆವಿಜಿ ಬ್ಯಾಂಕಿನಲ್ಲಿ 2012 ರಲ್ಲಿ ನಾನು ಬ್ಯಾಂಕಿನಲ್ಲಿ ಉಳಿತಾಯ ಖಾತೆ ತೆಗೆಯಲು ಹೋಗಿದ್ದೆ. 2015 ರಲ್ಲಿ ಕೆವಿಜಿ ಬ್ಯಾಂಕಿನ ಮುಖ್ಯಸ್ಥರು ನನ್ನನ್ನು ವಿಚಾರಣೆಗೆ ಕರೆಸಿದ್ದರು. ನನ್ನನ್ನು ಕೃಷಿ ಸಾಲ ಪಡೆದುಕೊಂಡ ಬಗ್ಗೆ ವಿಚಾರಣೆ ಮಾಡಿದರು. ಆ ಸಮಯದಲ್ಲಿ ನಾನು ಉಳಿತಾಯ ಖಾತೆ ತೆಗೆದಿರುವ ವಿಚಾರ ಮಾತ್ರ ಗೊತ್ತು. ಬೇರೆ ಯಾವುದೇ ವಿಚಾರ ಗೊತ್ತಿಲ್ಲ ಎಂದು ತಿಳಿಸಿದೆ. ಅಧಿಕಾರಿಗಳು ನನಗೆ ರೂ 90,304/ ಕೃಷಿ ಸಾಲ ಇದೆ ಎಂದು ತಿಳಿಸಿದರು. ಸದರಿ ಅಧಿಕಾರಿಗಳು ನೀವು ರೂ 60,000/ ಕೃಷಿ ಸಾಲ ಪಡೆದುಕೊಂಡಿದ್ದು, ಬಡ್ಡಿ ಸೇರಿ ಒಟ್ಟು ರೂ 90,304/ ಇದ್ದು, ಸದರಿ ಸಾಲ ನಿಮ್ಮ ಉಳಿತಾಯ ಖಾತೆಯಿಂದ ಜಮಾ ಮಾಡಿ, ಕೃಷಿ ಸಾಲ ಮುಕ್ತಾಯವಾಗಿರುತ್ತದೆ ಎಂದು ತಿಳಿಸಿದರು. ಮುಂದುವರೆದು ಅಧಿಕಾರಿಗಳು ನೀವು ಕೃಷಿ ಸಾಲ ಪಡೆಯುವ ಸಮಯದಲ್ಲಿ ಜಮೀನಿನ ಪಹಣಿ ಮತ್ತು ಗುರುತಿನ ದಾಖಲೆಗಳನ್ನು ನೀಡಿರುತ್ತೀರಿ ಎಂದು ಕೇಳಿದಾಗ ನಾನು ಉಳಿತಾಯ ಖಾತೆ ಮಾಡುವಾಗ ಕೇವಲ ಗುರುತಿನ ದಾಖಲೆಗಳನ್ನು ಮಾತ್ರ ನೀಡಿರುತ್ತೇನೆ ಎಂದು ತಿಳಿಸಿದೆ. ಅದೇ ಸಮಯದಲ್ಲಿ ಅಧಿಕಾರಿಗಳು ಫಾರ್ಮ ನಂಃಕೆ20(ಆರ್), ಕೆ21(ಆರ್) ಮತ್ತು ಕೆ20(ಎ) ದಾಖಲೆಗಳಲ್ಲಿ ನನ್ನ ಮತ್ತು ಜಾಮೀನುದಾರರ ಸಹಿಗಳು ಇರುತ್ತೇವೆ ಎಂದು ತೋರಿಸಿದರು ಅದಕ್ಕೆ ನಾನು ಅವು ನನ್ನ ಸಹಿಗಳು ಅಲ್ಲ ಎಂದು ತಿಳಿಸಿರುತ್ತೇನೆ. ಆ ಸಮಯದಲ್ಲಿ ಆರೋಪಿ ಬ್ಯಾಂಕಿನ ಶಾಖಾ ವ್ಯವಸ್ಥಾಪಕರಾಗಿ ಕರ್ತವ್ಯ ನಿರ್ವಹಿಸುತಿದ್ದರು. ನಂತರ ಬ್ಯಾಂಕಿನವರು ನಿಮ್ಮದು ಯಾವುದೇ ಸಾಲ ಇಲ್ಲ ಎಂದು 2015 ರಲ್ಲಿ ನನಗೆ ಪ್ರಮಾಣ ಪತ್ರ ನೀಡಿದರು.

**<u>ಪಾಟೀ ಸವಾಲುಃ</u>**(ಈ ಹಂತದಲ್ಲಿ ಆರೋಪಿ ಪರ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಖ್ತಲೇಖನಕ್ಕೆ ದಿಃ23-02-2022 ರಂದು ಮ. 1ಃ12 ರಿಂದ 1ಃ25 ಗಂಟೆಯವರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು, ಕುಂದಗೋಳ.

**ಹಿರಿಯ ದಿವಾಣಿ ನ್ಯಾಯಾಲಯ, ಕುಂದಗೋಳ**

**ಸಿ.ಸಿ. ನಂ. 05/2021 ಸಿ. ಡಬ್ಲ್ಯೂ: 1. ಪಿ ಡಬ್ಲ್ಯೂ : 3**

ದಿನಾಂಕಃ 23/02/2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂ.ಮುಖ್ಯ ವಿಚಾರಣೆಃ ಸಸಅ ರವರಿಂದ**

8. ಶಿವಪ್ಪ ಬಸಪ್ಪ ಬಿಸಿರೊಟ್ಟಿ ಹೆಸರಿನಲ್ಲಿ ದಿಃ01.03.2011 ರಂದು ರೂ 30,016/, ದಿಃ25.06.2011 ರಂದು ರೂ. 31,727/ , ಮತ್ತು ದಿಃ25.06.2011 ರಂದು ರೂ 66,127/ ರೂಪಾಯಿಗಳ ಮೂರು ನಿರಕು ಠೇವಣಿ(Fixed Deposit)ಗಳನ್ನು ತೆರೆದು ನವೀಕರಣ ಮಾಡಲಾಗಿತ್ತು. ಸದರಿ ಶಿವಪ್ಪ ಬಸಪ್ಪ ಬಿಸಿರೊಟ್ಟಿರವರು ನಿರಕು ಠೇವಣಿಯ ರಶೀದಿಗಳನ್ನು ಬ್ಯಾಂಕಿನಿಂದ ಪಡೆದುಕೊಂಡಿರಲಿಲ್ಲ. ಈ ಮಧ್ಯ ಸದರಿಯವರು ಬಂದು ಮೂಲ ದಾಖಲೆ ಕಳೆದು ಹೋಗಿದೆ ದೃಢೀಕೃತ ದಾಖಲೆ ಕೊಡುವಂತೆ ಕೇಳಿಕೊಂಡಿದ್ದರು. ತದನಂತರ ಸದರಿಯವರು ಮೂರು ನಿರಕು ಠೇವಣಿಗಳನ್ನು ಮುಕ್ತಾಯಗೊಳಿಸಿ, ಹಣ ಪಡೆದುಕೊಂಡು ಹೋಗಿರುತ್ತಾರೆ. ಆದರೆ ರಶೀದಿಗಳನ್ನು ಬ್ಯಾಂಕಿಗೆ ಹಿಂತಿರುಗಿಸಿರಲಿಲ್ಲ. 2013 ರಲ್ಲಿ ಸದರಿ ವ್ಯಕ್ತಿ ಪುನಃ ಬ್ಯಾಂಕಿಗೆ ಬಂದು ದಾಖಲೆಗಳು ಕಳೆದುಹೋಗಿವೆ ಪುನಃ ದಾಖಲೆಗಳು ಕೊಡಿ ಎಂದು ಕೇಳಿದ. ಆತನಿಗೆ ನಿಯಮದಂತೆ ದಾಖಲೆ ನೀಡಿದೇವು. ಇದರಿಂದ ಸದರಿ ವ್ಯಕ್ತಿಗೆ ಎರಡು ಬಾರೀ ದಾಖಲೆಗಳನ್ನು ನೀಡಿದಂತೆ ಆಗಿರುತ್ತದೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಖ್ತಲೇಖನಕ್ಕೆ ದಿಃ23-02-2022 ರಂದು ಬೆಳಗ್ಗೆ 1ಃ20 ರಿಂದ 1:26 ಗಂಟೆಯವರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ.